**[38][ನಮೂನೆ ಜಿಎಸ್‌ಟಿ ಐಎನ್ಎಸ್–1**

ತಪಾಸಣೆ ಅಥವಾ ಶೋಧನೆಗಾಗಿ ಪ್ರಾಧಿಕೃತತೆ

*[ನಿಯಮ 139 (1) ನೋಡಿ]*

**ಇವರಿಗೆ:**

____________________

____________________

**(ಅಧಿಕಾರಿಯ ಹೆಸರು ಮತ್ತು ಪದನಾಮ)**

ನನ್ನ ಮುಂದೆ ಮಾಹಿತಿಯನ್ನು ಹಾಜರುಪಡಿಸಲಾಗಿದ್ದು ಮತ್ತು ನಾನು ಕೆಳಕಂಡಂತೆ ನಂಬಲು ಕಾರಣಗಳನ್ನು ಹೊಂದಿರುತ್ತೇನೆ

ಎ. ಮೆ: ________________________________________ರವರು

- ☐ ಸರಕು ಮತ್ತು /ಅಥವಾ ಸೇವೆಗಳ ಪೂರೈಕೆಗೆ ಸಂಬಂಧಿಸಿದಂತೆ ವಹಿವಾಟನ್ನು ಬಚ್ಚಿಟ್ಟಿರುತ್ತಾರೆ.
- ☐ ತನ್ನ ವಶದಲ್ಲಿರುವ ಸರಕುಗಳ ದಾಸ್ತಾನಿಗೆ ಸಂಬಂಧಿಸಿದ ವಹಿವಾಟುಗಳನ್ನು ಬಚ್ಚಿಟ್ಟಿರುತ್ತಾರೆ.
- ☐ ಅಧಿನಿಯಮದಡಿಯಲ್ಲಿ ತನ್ನ ಹಕ್ಕಿನಲ್ಲಿ ಅರ್ಹವಾಗಿ ಹೊಂದಿರುವುದಕ್ಕಿಂತ ಅಧಿಕವಾಗಿ ಹೂಡುವಳಿ ತೆರಿಗೆ ಜಮೆಯನ್ನು ಕ್ಲೇಮು ಮಾಡಿರುತ್ತಾರೆ.
- ☐ ಅಧಿನಿಯಮದಡಿಯಲ್ಲಿ ತನ್ನ ಹಕ್ಕಿನಲ್ಲಿ ಅರ್ಹವಾಗಿ ಹೊಂದಿರುವುದಕ್ಕಿಂತ ಅಧಿಕವಾಗಿ ಮರುಪಾವತಿಯನ್ನು ಕ್ಲೇಮು ಮಾಡಿರುತ್ತಾರೆ.
- ☐ ಈ ಅಧಿನಿಯಮದ ಅಡಿಯಲ್ಲಿನ ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಉಲ್ಲಂಘನೆಯಲ್ಲಿ ತೊಡಗಿರುತ್ತಾರೆ.

**ಅಥವಾ**

ಬಿ. ಮೆ:__________________________________________ರವರು

- ☐ ತೆರಿಗೆ ಸಂದಾಯದಿಂದ ತಪ್ಪಿಸಿಕೊಂಡಿರುವ ಸರಕುಗಳ ಸಾಗಣೆಯ ವ್ಯವಹಾರದಲ್ಲಿ ತೊಡಗಿರುತ್ತಾರೆ.
- ☐ ತೆರಿಗೆಯ ಸಂದಾಯದಿಂದ ತಪ್ಪಿಸಿಕೊಂಡಿರುವ ಸರಕುಗಳನ್ನು ಇಟ್ಟಿರುವ ಒಂದು ಉಗ್ರಾಣ ಅಥವಾ ಒಂದು ಗೋದಾಮು ಅಥವಾ ಯಾವುದೇ ಇತರೆ ಸ್ಥಳದ ಮಾಲೀಕ ಅಥವಾ ನಿರ್ವಾಹಕರಾಗಿರುತ್ತಾರೆ.
- ☐ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯ ಸಂಭವನೀಯ ತಪ್ಪಿಸುವಿಕೆಗೆಕಾರಣವಾಗುವಂಥ ರೀತಿಯಲ್ಲಿ ಅವರ ಲೆಕ್ಕಪುಸ್ತಕಗಳನ್ನು ಅಥವಾ ಸರಕುಗಳನ್ನು ಇಟ್ಟಿರುತ್ತಾರೆ.

**ಅಥವಾ**

ಸಿ.

- ☐ ಈ ಕೆಳಕಂಡ ವ್ಯಾಪಾರ/ವಾಸಸ್ಥಳ ಆವರಣಗಳಲ್ಲಿ ಮುಟ್ಟುಗೋಲಿಗೆ ಬಾಧ್ಯವಾಗಬಹುದಾದ ಸರಕು/ ಅಧಿನಿಯಮದ ಅಡಿಯಲ್ಲಿ ಯಾವದೇ ನಡಾವಳಿಗಳಿಗೆ ಸುಸಂಗವಾಗುವಂಥ ಯಾವದೇ ದಸ್ತಾವೇಜುಗಳನ್ನು ರಹಸ್ಯವಾಗಿಟ್ಟಿರುವ ಕುರಿತ ವಿವರಗಳು ಈ ಕೆಳಗಿನಂತಿದೆ;

<<ಸ್ಥಳಗಳ ವಿವರಗಳು>>

ಆದ್ದರಿಂದ,–

ಅಧಿನಿಯಮದ ಪ್ರಕರಣ 67ರ ಉಪಪ್ರಕರಣ (1)ರ ಅಡಿಯಲ್ಲಿನನಗೆಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಾನು, ಸದರಿ ಅಧಿನಿಯಮದ ಮತ್ತು ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಯಾವುದೇ ನಡಾವಳಿಗಳಿಗೆ ಸುಸಂಗವಾಗುವಂಥ ಸರಕು ಅಥವಾ ದಸ್ತಾವೇಜುಗಳು ಮತ್ತು/ಅಥವಾ ಯಾವದೇ ಇತರೆ ವಸ್ತುಗಳ ತಪಾಸಣೆಗಾಗಿಅವಶ್ಯವಿರಬಹುದಾದ ನೆರವಿನೊಂದಿಗೆ, ಮೇಲೆ ತಿಳಿಸಿದ ವ್ಯಕ್ತಿಗೆ ಸೇರಿದ ಸ್ಥಳವನ್ನು ತಪಾಸಣೆ ಮಾಡಲುಅಗತ್ಯಪಡಿಸಿನಿಮ್ಮನ್ನು ಪ್ರಾಧಿಕೃತಗೊಳಿಸುತ್ತೇನೆ.

**ಅಥವಾ**

ಅಧಿನಿಯಮದ ಪ್ರಕರಣ 67ರ ಉಪಪ್ರಕರಣ (2)ರ ಅಡಿಯಲ್ಲಿನನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಾನು, ಅವಶ್ಯವಿರಬಹುದಾದ ನೆರವಿನೊಂದಿಗೆ,, ಮೇಲೆ ತಿಳಿಸಿದ ವ್ಯಕ್ತಿಗೆ ಸೇರಿದ ಸ್ಥಳವನ್ನು ಶೋಧನೆ ನೆಡೆಸಲು ಮತ್ತು ಸದರಿ ಅಧಿನಿಯಮದ ಮತ್ತು ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಯಾವುದೇ ನಡಾವಳಿಗಳಿಗೆ ಸುಸಂಗವಾಗುವಂಥ ಸರಕು ಅಥವಾ ದಸ್ತಾವೇಜುಗಳು

---

**[38]ಅಧಿಸೂಚನೆ ಆಇ 47 ಸಿಎಸ್ಎಲ್ 2017 (4–ಎ/2017) ದಿನಾಂಕ 05–07–2017ರ ಮೂಲಕ ನಮೂನೆ ಜಿಎಸ್‌ಟಿ ಐಎನ್ಎಸ್ –1 ರಿಂದ ನಮೂನೆ ಜಿಎಸ್‌ಟಿ ಸಿಪಿಡಿ –2ರ ವರೆಗೆ ಸೇರಿಸಲಾಗಿದೆ**

ಮತ್ತು/ಅಥವಾ ಯಾವದೇ ಇತರೆ ವಸ್ತುಗಳುಕಂಡುಬಂದಲ್ಲಿ ಅವುಗಳನ್ನು ವಶಕ್ಕೆ ತೆಗೆದುಕೊಳ್ಳಲು ಮತ್ತು ನಂತರ ಸದರಿ ಅಧಿನಿಯಮದ ಮತ್ತು ಇದರ ಅಡಿಯಲ್ಲಿ ಮಾಡಲಾದ ನಿಯಮಗಳ ಅಡಿಯಲ್ಲಿ ಮುಂದಿನ ಕ್ರಮಕ್ಕಾಗಿ ನನ್ನ ಮುಂದೆ ಅವುಗಳನ್ನು ಕೂಡಲೇ ಹಾಜರುಪಡಿಸಲು ಅಗತ್ಯಪಡಿಸಿನಿಮ್ಮನ್ನು ಪ್ರಾಧಿಕೃತಗೊಳಿಸುತ್ತೇನೆ.

ಸಂಬಂದಿಸಿದ ವ್ಯಕ್ತಿಯಿಂದ ದಾರಿ ತಪ್ಪಿಸುವ/ ಸಾಕ್ಷ್ಯಗಳನ್ನು ಅಕ್ರಮವಾಗಿ ತಿದ್ದುವ ತಪಾಸಣೆ/ಶೋಧನೆ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸುವ, ತಪ್ಪು ಹೇಳಿಕೆ ನೀಡುವ ಅಥವಾ ತಪ್ಪು ಸಾಕ್ಷ್ಯ ನೀಡುವ ಯಾವುದೇ ಪ್ರಯತ್ನವು, ಭಾರತೀಯ ದಂಡ ಸಂಹಿತೆಯ 179, 181, 191 ಹಾಗೂ 418 ಪ್ರಕರಣಗಳೊಂದಿಗೆಓದಿಕೊಂಡಂತೆ ಈ ಅಧಿನಿಯಮದ ಪ್ರಕಾರ ಕಾರಾಗೃಹ ವಾಸ ಮತ್ತು/ಅಥವಾ ಜುಲ್ಮಾನೆಯೊಂದಿಗೆ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

ನನ್ನ ಹಸ್ತಾಕ್ಷರದಲ್ಲಿ ಮತ್ತು ಮೊಹರಿನೊಂದಿಗೆ ಈ ದಿನ ದಿನಾಂಕ____________ನೇ ತಿಂಗಳ __________ ____________ ವರ್ಷದಂದು ನೀಡಲಾಗಿದೆ. __________ ದಿನಗಳವರೆಗೆ ಸಿಂಧುವಾಗಿರುತ್ತದೆ.

ಮೊಹರು. ನೀಡುವ ಪ್ರಾಧಿಕಾರಿಯ ಸಹಿ, ಹೆಸರು ಮತ್ತು ಪದನಾಮ

ಸ್ಥಳ:

ತಪಾಸಣಾಧಿಕಾರಿ/ಗಳ ಹೆಸರು, ಪದನಾಮ ಮತ್ತು ಸಹಿ

(i) ---

(ii) ---